ಕಾರಣಗಳೇನು ಮತ್ತು ಅವರು ಸೂಚಿಸಿದ ದರಗಳೆಷ್ಟು (ವಿವರ ನೀಡುವುದು):-

1. ಗೊರೂರು-ಹೊಳೇನರಸೀಪುರ ರಸ್ತೆಯ 11 ನೇ ಕಿ.ಮೀ. ನಿಂದ 19 ನೇ ಕಿ.ಮೀವರೆಗೆ ಸಲ್ಲಿಸಿದ್ದ ಟೆಂಡರ್ ಗಳನ್ನು ರದ್ದುಪಡಿಸಲಾಗಿಲ್ಲ.

ಗೊರೂರು-ಹೊಳೇನರಸೀಪುರ ರಸ್ತೆಯ 1ನೇ ಕಿ.ಮೀ ನಿಂದ 10 ನೇ ಕಿ.ಮೀವರೆಗೆ ಸಲ್ಲಿಸಿದ್ದ ಟೆಂಡರ್ ಗಳನ್ನು ಟೆಂಡರ್ ಗಳನ್ನು ಟೆಂಡರ್ ಪ್ರಕರಣೆಯಲ್ಲಿ ಸೂಚಿಸಿರುವ ಸಂಖ್ಯೆ: 1, 2 ಮತ್ತು 4 ರ ನಿಬಂಧನೆ ಪ್ರಕಾರ ಪಾಲಿಸದೆ ಇರುವುದರಿಂದ ಟೆಂಡರ್‌ನ್ನು ರದ್ದುಪಡಿಸಲಾಗಿದೆ.

ರದ್ದುಪಡಿಸಲಾದ ಟೆಂಡರ್ ಗಳ ವಿವರಗಳ ಪಟ್ಟಿಯನ್ನು ಲಗತ್ತಿಸಿದೆ.

2. ಅರಕಲಗೂಡು-ಜೋಡಿಗುಬ್ಬಿ ರಸ್ತೆಯ 1ನೇ ಕಿ.ಮೀ. ನಿಂದ 12.80 ಕಿ.ಮೀವರೆಗೆ ಅಭಿವೃದ್ಧಿ ಮತ್ತು ಮರು ಡಾಂಬರೀಕರಣ ಕೆಲಸಕ್ಕೆ ಸಲ್ಲಿಸಿದ್ದ ಟೆಂಡರ್ ಗಳನ್ನು ಟೆಂಡರ್ ನಿಬಂಧನೆ ಸಂ: 1-2 ಮತ್ತು 4 ರ ಪ್ರಕಾರ ಪಾಲಿಸದೆ ಇರುವುದರಿಂದ ರದ್ದುಪಡಿಸಲಾಗಿದೆ.

ರದ್ದು ಪರಡಿಸಲಾದ ಟೆಂಡರ್ ಗಳ ವಿವರಗಳ ಪಟ್ಟಿಯನ್ನು ಲಗತ್ತಿಸಿದೆ.

ಶ್ರೀ ಕೆ.ಎನ್. ನಾಗೇಗೌಡ

(ಬೃಹತ್ ನೀರಾವರಿ ಸಚಿವರು)

ವಿಷಯ:- ರಾಜ್ಯದಲ್ಲಿ ಹತ್ತು ವರ್ಷಕ್ಕೂ ಮಿಕ್ಕೀ ಶಿಕ್ಷೆ ಅನುಭವಿಸಿರುವ ಖೈದಿಗಳ ಬಿಡುಗಡೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:- 100 (194)

ಶ್ರೀ ರುಕ್ಕಯ್ಯ ಪೂಜಾರಿ (ಏಟ್ಲ):

ಮಾನ್ಯ ಕಾರಗೃಹ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಹತ್ತು ವರ್ಷಕ್ಕೂ ಮೇಲ್ಪಟ್ಟು ಶಿಕ್ಷೆ ಅನುಭಸುತ್ತಿರುವ ಖೈದಿಗಳ ಸಂಖ್ಯೆ ಎಷ್ಟು?:- 181

ಆ) ಮಾನವೀಯತೆ ದೃಷ್ಟಿಯಿಂದ ಅವರನ್ನು ಬಿಡುಗಡೆ ಮಾಡಲು ಸರ್ಕಾರವು ಪರಿಶೀಸುವುದೇ:- ಈ ಖೈದಿಗಳು ಜೀವಾವಧಿ ಶಿಕ್ಷೆಗೊಳಗಾದವರಿದ್ದು, ಅವರು 14 ವರ್ಷಗಳ ವಾಸ್ತವಿಕ ಸಜೆ ಅನುಭವಿಸುವುದು ಕಾನೂನಿನಲ್ಲಿ ಕಡ್ಡಾಯವಾಗಿದೆ. ಆದರೂ ಇಂಥವರಲ್ಲಿ ಮರಣಾಂತಕ ಖಾಯಿಲೆಗೆ ಗುರಿಯಾದ ಅಥವಾ ಪಾರ್ಶ್ವವಾಯುವಿನಿಂದ ಅಂಗವಿಕಲರಾದ ಅಥವಾ 65 ಕ್ಕೂ ಹೆಚ್ಚು ವಯಸ್ಸಾದ ಅಥವಾ ಮಹಿಳಾ ಖೈದಿಗಳಿದ್ದಲ್ಲಿ ಅವರ ಮೇಲೆ ಸಂವಿಧಾನ 161 ನೇ ಕಾಲಂನ್ವಯ ದಯೆ ತೋರಿಸಲು ಘನವೆತ್ತ ರಾಜ್ಯಪಾಲರಿಗೆ ಆಗಾಗ ಶಿಫಾರಸ್ಸು ಮಾಡಲಾಗುತ್ತದೆ.

ಶ್ರೀ ವಿ. ಸೋಮಣ್ಣ

(ಕಾರಗೃಹ ಮತ್ತು ಗೃಹರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು)

ವಿಷಯ:- ಮಂತ್ರಿಗಳ ಹಾಗೂ ಮಾಜಿಮಂತ್ರಿಗಳ ದೂರವಾಣಿ ವೆಚ್ಚದ ಬಗ್ಗೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:- 101 (358)

ಶ್ರೀ ಯು. ಆರ್. ಸಭಾಪತಿ (ಉಡುಪಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ